ಘಟನೆಗಳು ಜರುಗಿದಲ್ಲಿ ರಸಗೊಬ್ಬರ ನಿಯಂತ್ರಣ ಆದೇಶ 1985ರನ್ವಯ ಇಲಾಖಾ ವತಿಯಿಂದ ಕ್ರಮವನ್ನು ಕೈಗೊಳ್ಳಲಾಗುವುದು.

469 ಶ್ರೀ ಪಾಟೀಲ್ ಎ.ಎಸ್. ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕರ್ನಾಟಕ ಅಪೆಕ್ಸ್ ಬ್ಯಾಂಕಿನಿಂದ ನೆಗೆಟಿವ್ ಎನ್.ಡಿ.ಆರ್. ಹೊಂದಿರತಕ್ಕಂತಹ ಸಹಕಾರಿ ಹಾಗೂ ಖಾಸಗಿ ರಂಗದ ಸಕ್ಕರೆ ಕಾರ್ಖಾನೆಗಳಿಗೆ ಸಾಲ ನೀಡಿರುವುದು ನಿಜವೇ;

ಆ) 1995 ರಿಂದ ಇದುವರೆಗೆ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನಿಂದ ನೆಗೆಟಿವ್ ಎನ್.ಡಿ.ಆರ್. ಹೊಂದಿರತಕ್ಕಂತಹ ಸಹಕಾರಿ ಹಾಗೂ ಖಾಸಗಿ ರಂಗದ ಯಾವ ಯಾವ ಸಕ್ಕರೆ ಕಾರ್ಖಾನೆಗಳಿಗೆ ಎಷ್ಟು ಎಷ್ಟು ಸಾಲ ನೀಡಲಾಗಿದೆ;

ಇ) ಬ್ಯಾಂಕ್ ಈ ರೀತಿಯಾಗಿ ಸಾಲ ನೀಡಿರುವುದರ ಉದ್ದೇಶವೇನು?

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಸಚಿವರು)

ಅ) ರಾಜ್ಯದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳು ನೆಗೆಟಿವ್ ಎನ್.ಡಿ.ಆರ್. ಹೊಂದಿದ್ದಾಗ್ಯೂ ದುಡಿಯುವ ಬಂಡವಾಳವಾಗಿ ಸಕ್ಕರೆ ದಾಸ್ತಾನನ್ನು ಅಡಮಾನ ಮಾಡಿಕೊಂಡು ಕಬ್ಬು ಬಿಲ್ಲುಗಳನ್ನು ಪಾವತಿಸಲು ಸಾಲ ಮಂಜೂರು ಮಾಡಲಾಗಿರುತ್ತದೆ. ಆದರೆ ಎನ್.ಡಿ.ಆರ್. ನೆಗೆಟಿವ್ ಇರುವ ಖಾಸಗಿ ಸಕ್ಕರೆ ಕಾರ್ಖಾನೆಗಳಿಗೆ ಸಾಲ ನೀಡಿರುವುದಿಲ್ಲ.

ಆ) ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಇ) ಸಹಕಾರಿ ಸಕ್ಕರೆ ಕಾರ್ಖಾನೆಗಳು ಕಬ್ಬು ನುರಿಸುವ ಋತುಮಾನದಲ್ಲಿ ರೈತರಿಂದ ಪಡೆದ ಕಬ್ಬನ್ನು ನುರಿಸಿ ಸಕ್ಕರೆ ಉತ್ಪಾದನೆಯ ನಂತರ, ಅದೇ ಸಕ್ಕರೆ ದಾಸ್ತಾನನ್ನು ಬ್ಯಾಂಕಿಗೆ ಒತ್ತೆಯಾಗಿಟ್ಟುಕೊಂಡು (pledge) ಬ್ಯಾಂಕು ಹಾಗೂ ಸಕ್ಕರೆ ಕಾರ್ಖಾನೆಯ ಜಂಟಿ ಕೀಲಿ ವ್ಯವಸ್ಥೆಯಲ್ಲಿ ರೈತರಿಗೆ ಕಬ್ಬಿನ ಬಿಲ್ಲನ್ನು ಪಾವತಿಸುವ ಉದ್ದೇಶಕ್ಕಾಗಿ ಬ್ಯಾಂಕಿನಿಂದ ದುಡಿಯುವ ಬಂಡವಾಳವಾಗಿ ಸಾಲ ನೀಡಿರುತ್ತದೆ.

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಪಾಟೀಲ್ ಎ.ಎಸ್. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 469ಕ್ಕೆ ಅನುಬಂಧ

ನೆಗೆಟಿವ್ ಎನ್‌ಡಿಆರ್ ಹೊಂದಿರತಕ್ಕಂತ ಸಕ್ಕರೆ ಕಾರ್ಖಾನೆಗಳ ವಿವರ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಸಹಕಾರಿ ಸಕ್ಕರೆ ಕಾರ್ಖಾನೆಯ ಹೆಸರು	ಎನ್‌ಡಿಆರ್ ನೆಗೆಟಿವ್ ಆದ ವರ್ಷ	ಮಂಜೂರಾದ ವರ್ಷ	ಮಂಜೂರಾದ ಮೊತ್ತ	ದಿ. 30-6-2009 ರಲ್ಲಿದ್ದಂತೆ ಹೂರ ಬಾಕಿ	ಷರಾ
1	2	3	4	5	6	7
1	ಶ್ರೀ ಶ್ರೀರಾಮ ಸಸಕಾ, ಚುಂಚನಕಟ್ಟೆ	1996-97	1999-2000 2000-2001 2001-2002 2002-2003 2003-2004 2004-2005	200.00 800.00 800.00 700.00 700.00 756.79	- - - - - 151.09	ರಾಜ್ಯ ಸರ್ಕಾರದ ಖಾತರಿ ಆಧಾರದ ಮೇಲೆ ಮಂಜೂರು ಮಾಡಿದೆ
2	ಪಾಂಡವಪುರ ಸಸಕಾ, ಪಾಂಡವಪುರ	1995-96	1996-1997 1997-1998 1998-1999 1999-2000 2000-2001 2001-2002	684.00 1000.00 800.00 600.00 500.00 550.00	- - - - - 523.59	-ಅದೇ-
3	ಕರ್ನಾಟಕ ಸಸಕಾ, ಹಾವೇರಿ	1994-95	1997-1998 1998-1999 1999-2000 2000-2001 2001-2002 2002-2003	850.00 1020.00 1020.00 786.25 925.00 900.00	- - - - - 904.01	-ಅದೇ-
4	ಬೀದರ್ ಸಸಕಾ, ಹಳ್ಳಿಖೇಡ್	2000-01	1999-2000 2000-2001 2002-2003 2003-2004 2004-2005 2004-2005 (ಎನ್‌ಸಿಡಿಸಿ)	1146.65 146.65 1146.65 1146.65 1100.00 751.93 500.00	409.83	-ಅದೇ-
5	ನಾರಂಜ ಸಸಕಾ, ಇಮಾಂಪುರ	2002-03	2002-2003 2004-2005 2005-2006 2006-2007 (ಎನ್‌ಸಿಡಿಸಿ)	1400.00 500.00 1000.00 1500.00	216.24	-ಅದೇ-

1	2	3	4	5	6	7
6	ವಾಣಿವಿಲಾಸ್ ಸಸಕಾ, ಹಿರಿಯೂರು	–	1996–1997 1997–1998 1998–1999 1999–2000 2000–2001 2001–2002	1100.00 650.00 650.00 700.00 800.00 700.00	447.05	–ಅದೇ–
7	ಭಾಗ್ಯಲಕ್ಷ್ಮೀ ಸಸಕಾ, ಖಾನಾಪುರ	1999–2000	1997–1998 1998–1999 1999–2000 2000–2001	1500.00 1500.00 14518.15 1694.00	969.21	–ಅದೇ–
8	ಮಲಪ್ರಭಾ ಸಸಕಾ, ಎಂ.ಕೆ. ಹುಬ್ಬಳ್ಳಿ	2002–03	2005–2006 2004–2005 2005–2006 (ಎನ್‌ಸಿಡಿಸಿ)	2500.00 400.00 1000.00	683.74	–ಅದೇ–
9	ಮಹಾತ್ಮಗಾಂಧಿ ಸಸಕಾ, ಬೀದರ್	2002–03	2004–2005 2005–2006 2006–207 (ಎನ್‌ಸಿಡಿಸಿ)	500.00 1800.00 1500.00	ಸಾಲ ಖಾತೆ ಚುಕ್ತಾ ಆಗಿರುತ್ತದೆ	
10	ಭದ್ರಾ ಸಸಕಾ, ದೊಡ್ಡಭಾತಿ	2002–03	2002–2003	1300.00	928.87	
11	ಕೃಷ್ಣ ಸಸಕಾ, ಅಥಣಿ	2003–2004	2003 2004 2005	500.00 500.00 613.60	ಚುಕ್ತಾ ಆಗಿರುತ್ತದೆ	
12	ರೈತರ ಸಸಕಾ, ರನ್ನನಗರ	2000–01	2000–2001 2001–2002 2002–2003 2003–2004 2004–2005 (ಎನ್‌ಸಿಡಿಸಿ) 2005–2006 (ಎನ್‌ಸಿಡಿಸಿ)	2950.00 2800.00 2800.00 802.00 400.00 1000.00	ಚುಕ್ತಾ ಆಗಿರುತ್ತದೆ	

1231 ಶ್ರೀ ಪುಟ್ಟರಂಗಶೆಟ್ಟಿ ಸಿ. ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಪಡಿತರ ಅಂಗಡಿಗಳಿಗೆ ಸಂಖ್ಯೆ ಎಷ್ಟು;

ಆ) ಬಿಡುಗಡೆಯಾಗಿರುವ ಆಹಾರ ಧಾನ್ಯ ಸಮರ್ಪಕವಾಗಿ ವಿತರಣೆ ಯಾಗಿದೆಯೇ;

ಇ) ಹಾಗಿಲ್ಲದಿದ್ದಲ್ಲಿ, ಇದನ್ನು ತಪಾಸಣೆ ಮಾಡಲಾಗಿದೆಯೇ (ವಿವರ ನೀಡುವುದು)